

ಅಥವಾ ಭಂಗಿಗಳನ್ನೇ ಕೆಳಗೆ ಇಳಿಸಲಾಗುತ್ತದೆ. ಇಂದಿಗೂ ಅವರು ಬರಿಗೈ, ಬರಿಗಾಲು, ಬರಿಮೈಯಲ್ಲಿ ಸನಿಕೆ, ಬುಟ್ಟಿ, ಬಕೀಟು, ಕಬ್ಬಿಣದ ಹಾರೆ ಇತ್ಯಾದಿ ತಮ್ಮದೇ ಸಲಕರಣೆಗಳೊಂದಿಗೆ ಕೆಳಗಿಳಿದು ಕೆಲಸ ಮಾಡುವಂತೆ ಗುತ್ತಿಗೆದಾರರು ಒತ್ತಾಯಿಸುತ್ತಾರೆ, ಕಾಯಿದೆ ಜಾರಿಯಾದ ನಂತರವೇ ಎಷ್ಟೆಲ್ಲ ಕೆಲಸಗಾರರು ಮಲದಗುಂಡಿಯಲ್ಲಿ ಕೆಲಸ ಮಾಡುವಾಗಲೇ ಸತ್ತಿದ್ದರೂ, ಸಂಬಂಧಿಸಿದ ಗುತ್ತಿಗೆದಾರರನ್ನು, ಅಧಿಕಾರಿಗಳನ್ನು ಯಾರನ್ನೂ ಬಂಧಿಸಲಾಗಿಲ್ಲ. ಬಂಧನದಂತಹ ಪ್ರಹಸನ ನಡೆದರೂ, ಅವರು ಕೂದಲೂ ಕೊಂಕದಂತೆ ಹೊರಬರುತ್ತಾರೆ.

## ಮಲದ ಗುಂಡಿಯೊಳಗಿನ ವಿಷಾನಿಲ

ಸೆಪ್ಟಿಕ್ ಟ್ಯಾಂಕ್ ಮತ್ತು ಚರಂಡಿಗುಂಡಿಗಳಲ್ಲಿ ಹೈಡ್ರೋಜನ್ ಸಲ್ಫೈಡ್, ಅಮೋನಿಯಾ, ಮೀಥೇನ್, ಕಾರ್ಬನ್ ಡಯಾಕ್ಸೈಡ್, ಸಲ್ಫರ್ ಡಯಾಕ್ಸೈಡ್ ಮತ್ತು ನೈಟ್ರೋಜೆನ್ ಆಕ್ಸೈಡ್‌ಗಳಿರುತ್ತವೆ. ಗುಂಡಿ ಹಳೆಯದಾದಷ್ಟೂ ಆಳವಾಗಿದ್ದಷ್ಟೂ ಈ ಅನಿಲಗಳ ಸಾಂದ್ರತೆ ಹೆಚ್ಚಿರುತ್ತದೆ. ಗುಂಡಿಯ ಮೇಲೆ ಮುಚ್ಚಿರುವ ಕಲ್ಲು ಅಥವಾ ಮುಚ್ಚಳ ಸರಿಸಿದ ಐದು ಹತ್ತು ನಿಮಿಷಕ್ಕೆ ಮೇಲೆ ಇರುವ ವಿಷಾನಿಲ ಕಡಿಮೆಯಾದಂತೆ ಅನ್ನಿಸಿದರೂ, ಗುಂಡಿಯ ಆಳದಲ್ಲಿ ಇನ್ನೂ ತುಂಬ ಇರುತ್ತದೆ. ಕೆಲಸಗಾರರು ಮೇಲಿನಿಂದ ನೋಡಿ, ಕಡಿಮೆಯಾಗಿರಬಹುದು ಎಂದು ಭಾವಿಸಿ ಇಳಿಯುತ್ತಾರೆ.

‘ಅವರು ಕೆಲಸಕ್ಕೆ ಬರೋವಾಗ್ಲೇ ಸ್ವಲ್ಪ ಕುಡಿದು ಬಂದಿರ್ತಾರೆ, ವಿಷಾನಿಲ ಇರುತ್ತೆ ಅಂತ ಗೊತ್ತಿರೋದಿಲ್ಲವಾ, ಗುಂಡಿಯ ಮೇಲಿನ ಕಲ್ಲು ಸರಿಸಿ ಸ್ವಲ್ಪ ಹೊತ್ತು ಬಿಟ್ಟು ಇಳಿಯಬೇಕು... ಇಷ್ಟೆಲ್ಲ ಗುಂಡಿ ಕ್ಲೀನ್ ಮಾಡಿರ್ತಾರೆ, ಅಷ್ಟೂ ಗೊತ್ತಾಗೋದಿಲ್ಲವಾ’ ಎಂದು ಜಾತಿ ಮೆಟ್ಟಿಲಿನ ಮೇಲೆ ಎತ್ತರದಲ್ಲಿ ನಿಂತವರು ಟೀವಿ ನೋಡುತ್ತಲೋ ಪೇಪರು ಓದುತ್ತಲೋ ಸುದ್ದಿಯೊಂದಿಗೆ ಕಾಫಿ–ಟೀ ಜೊತೆಗೆ ಗುಟುಕರಿಸುತ್ತ ಸಾಮಾನ್ಯವಾಗಿ ಆಡುವ ಮಾತು.

“ಹೌದು ಕುಡಿದಿರ್ತೀವಿ, ಯಾಕೆ ಅಂತ ಕೇಳಿ. ನೀವು ಮಾಡಿರೋ ಗಲೀಜಿನಲ್ಲಿ ಇಳಿದು ಕ್ಲೀನು ಮಾಡಬೇಕು. ಕೈಯಿಂದ ಸನಿಕೆ ಹಾಕಿ ಗಟ್ಟಿಯಾಗಿರೋದನ್ನು ಎತ್ತಬೇಕು, ಕಟ್ಟಿಕೊಂಡಿದ್ದನ್ನು ಬಿಡಿಸಬೇಕು. ಮತ್ತೆ ಆ ವಾಸನೆ, ಹೊಲಸು ನಾವು ತಡಕಳ್ಳದು ಹೆಂಗೆ... ಕೈಯಿಂದ ಎತ್ತೋದು ಹೆಂಗೆ... ನಾವು ಮನಿಸ್ಯಾರಲ್ಲವಾ... ಅದಕ್ಕೆ ವಾಸನೆ ಏನೂ ಗೊತ್ತಾಗಬಾರದು ಅಂತ ಸ್ವಲ್ಪ ಕುಡಿದಿರ್ತೀವಿ. ಹಿಂಗಾಗಿ ನಮಗೆ ಕೆಟ್ಟ ಗಾಳಿ ಇರದು ಗೊತ್ತಾಗಲ್ಲ. ಕೆಲವು ಸಲ ಒಳಗೆ ಇಳಿದು ಐದು ನಿಮಿಷವಾದ ಮೇಲೆ ಗೊತ್ತಾಗುತ್ತೆ, ಇನ್ನೂ ಕೆಟ್ಟ ಗಾಳಿ ಒಳಗೇ ಐತೆ ಅಂತ. ಏನೋ ಎಚ್ಚುಕಡಿಮೆಯಾಗ್ಯೆತೆ ಅಂತ ಗೊತ್ತಾಗೋ ಮುಂಚೇನೆ ಪ್ರಾಣ ಹೋಗಿರತ್ತೈತೆ” ಎನ್ನುತ್ತಾರೆ ಮುಳಬಾಗಿಲಿನ ವೆಂಕಟರವಣಪ್ಪ.

“ಅವರಿಗೂ ಬದುಕಬೇಕು ಅಂತ ಆಸೆ ಇರಲ್ಲವಾ... ಸಾಯಕ್ಕೆ ಅಂತ ಗುಂಡಿಗೆ ಇಳಿದಿರ್ತಾರಾ? ಕೆಲವು ಸಲ ನಮ್ಮನ್ನು ಕರೆದುಕೊಂಡು ಹೋದವ್ರು ಅದು ಎಷ್ಟು ವರ್ಷದ ಹಿಂದಿನ ಸೆಪ್ಟಿಕ್ ಟ್ಯಾಂಕು, ಎಷ್ಟು ಆಳ ಐತೆ ಅಂತೆಲ್ಲ ಸರಿಯಾಗಿ ಹೇಳಿರಲ್ಲ. ಭಾಳ ವರ್ಸ ಆಗಿಲ್ಲ ಕಟ್ಟಿ, ಎಚ್ಚು ಆಳ ಇಲ್ಲಪ್ಪ ಅಂದಬಿಡ್ತಾರೆ. ನಮಗೂ ಆ ವಾಸನೆ, ಗಲೀಜು ಕೆಲಸ ಬ್ಯಾಗ ಬ್ಯಾಗ ಮುಗಿಸಿ ಬಂದುಬಿಡಮ ಅನ್ನಿಸ್ತರತ್ತೈತೆ. ಗೊತ್ತಾಗದೇ ಇಳೀತೀವಿ, ಕುಡ್ಕೊಂಡು ಕೆಲಸಕ್ಕೆ ಬರ್ತಾರೆ ಅಂತ ಇಷ್ಟೆಲ್ಲ ಕಾಯಿದೆ ಮಾತಾಡೋರು, ಗುಂಡೀಲಿ ನಿಮ್ಮ ಹೇಲು ಬಳಿಯೋ ಕೆಲಸಕ್ಕೆ ನಮ್ಮನ್ನು ಯಾಕೆ ಇಳಿಸಬೇಕು” ಎಂದು ಬೆಂಗಳೂರಿನ ಕಂಟೋನ್ಮೆಂಟ್ ಹಿಂದೆ ಇರುವ ಎಂ ಆರ್ ಎಸ್ ಪಾಳ್ಯದ




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450

